# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ದಿನಾಂಕ:06-03-2021

## ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

**ವಿಷಯ:-** ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:06-03-2021 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಗೆ ಹಾಜರಾಗಿದ್ದವರ ವಿವರಗಳು:**

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಡಾ॥ಸುರೇಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ರಾಚಪ | ಕಾರ್ಯದರ್ಶಿ |
| 3 | ಶ್ರೀ.ರಾಮಕೃಷ್ಣ | ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ |
| 4 | ಶ್ರೀ.ರಘುನಂದನ್, | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ವೆಂಕಟೇಶ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಅಧ್ಯಕ್ಷರು |
| 6 | ಶ್ರೀ.ವೆಂಕಟೇಶ್.ಹೆಚ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಕಾರ್ಯದರ್ಶಿ |
| 7 | ಶ್ರೀ.ಸಿ.ಟಿ.ಮಲ್ಲೇಶ್ | ಎ.ಇ.ಸಿ.ಎಸ್ ಲೇಔಟ್ |
| 8 | ಶ್ರೀ.ರಾಜ ಶ್ರೀ | ವಾಸ ಲೇಔಟ್ |
| 9 | ಶ್ರೀ.ರಮೇಶ್ | ವಾಸ ಲೇಔಟ್ |
| 10 | ಶ್ರೀ.ಇಂದು | ದೊಡ್ಡನೆಕ್ಕುಂದಿ |
| 11 | ಶ್ರೀ.ಕೌಶಿಕ್ | ಮಾರ್ಷಲ್ |
| 12 | ಶ್ರೀ.ಸುರೇಶ್ | BWSSB |
| 13 | ಶ್ರೀ.ಜೂಡ್ | ವಾಸ ಲೇಔಟ್ |
| 14 | Sri.Usgaonkar | ಎ.ಇ.ಸಿ.ಎಸ್ ಲೇಔಟ್ |

ಶ್ರೀ.ಡಾ॥ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸಭೆಯಲ್ಲಿ ಹಾಜರಿದ್ದ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಹಾಗೂ ಸಂಘಸಂಸ್ಥೆಯ ಮುಖ್ಯಸ್ಥರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

Scanned with CamScanner

1. ಸಭೆಯಲ್ಲಿ ದಿನಾಂಕ:20-02-2021 ರಂದು ನಡೆದ ನಡುವಳಿಗಳನ್ನು ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ವಿವರಿಸಿದರು.

1. ಸಭೆಯಲ್ಲಿ ಶ್ರೀಮತಿ.ರಾಜಶ್ರೀ ರವರು ಪೌರಕಾರ್ಮಿಕರಿಗೆ ವೇಳಪಟ್ಟಿ ನಿಗಧಿಪಡಿಸಲು ಮತ್ತು ಬಿಬಿಎಂಪಿ ಆರೋಗ್ಯ ಇಲಾಖೆಯಲ್ಲಿ ಕಸವನ್ನು ತುಂಬಿಸಿ ಶ್ರೀಘ್ರವಾಗಿ ಕಾರ್ಯನಿರ್ವಹಿಸಲು ಪುಶ್‌ಕಾರ್ಟ್‌ಗಳು ಅವಶ್ಯಕತೆಯಿರುವುದೆಂದು ಕೋರಿದರು. ಸದರಿ ವಿಷಯವಾಗಿ ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಪೌರಕಾರ್ಮಿಕರಿಗೆ ವೇಳಪಟ್ಟಿ ನಿಗಧಿಪಡಿಸಿ ಹಾಗೂ ಪುಶ್‌ಕಾರ್ಟ್‌ಗಳನ್ನು ಕೆಲವು ವಾರ್ಡ್‌ಗಳಲ್ಲಿ ದಾನಿಗಳು ನೀಡಿರುತ್ತಾರೆ. ಆದರೆ ವಾರ್ಡ್ ನಂ.85ಕ್ಕೆ ದಾನಿಗಳು ಮುಂದೆ ಬಂದು ಸಹಾಯ ನೀಡಬೇಕೆಂದು ಸಾರ್ವಜನಿಕರಲ್ಲಿ ಕೋರಿದರು.

2. ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ದೊಡ್ಡನೆಕ್ಕುಂದಿ ಗ್ರಾಮಕ್ಕೆ ಬರುವ ಆಗಮನದ ರಸ್ತೆಯ ಚರಂಡಿಗೆ ಸ್ಲಾಬ್‌ನ್ನು ಅಳವಡಿಸಲು ಶ್ರೀ.ರಾಮಕೃಷ್ಣ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಕೋರಿದರು.

3. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಎ.ಇ.ಸಿ.ಎಸ್.ಬಡಾವಣೆಯ ಎ ಬ್ಲಾಕ್ ಆಟದ ಮೈದಾನದ ಪಾದಚಾರಿ ಮಾರ್ಗದ ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲವೆಂದು ದೂರಿರುತ್ತಾರೆ.

4. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಎ.ಇ.ಸಿ.ಎಸ್.ಬಡಾವಣೆಯ 60 ಅಡಿ ರಸ್ತೆಯಲ್ಲಿ ಅಡ್ಡ-ದಿಡ್ಡಿಯಾಗಿ ಪಾದಚಾರಿ ಮಾರ್ಗವನ್ನು ನಿರ್ಮಿಸಿದ್ದು, ಸದರಿ ಪಾದಚಾರಿ ಮಾರ್ಗವನ್ನು ಒಂದೇ ನೇರವಾಗಿ ನಿರ್ಮಿಸಲು ಶ್ರೀ.ರಾಮಕೃಷ್ಣ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ. ಸದರಿ ವಿಷಯವಾಗಿ ಶ್ರೀ.ರಾಮಕೃಷ್ಣ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರು ಮೇಲಾಧಿಕಾರಿಗಳ ಜೊತೆಯಲ್ಲಿ ಚರ್ಚಿಸಿ ಪಾದಚಾರಿ ಮಾರ್ಗವನ್ನು ಸರಿಪಡಿಸುವುದಾಗಿ ತಿಳಿಸಿರುತ್ತಾರೆ.

5. ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಪುಟ್‌ಪಾತ್ ತೆರವು ಕಾರ್ಯಕ್ರಮವನ್ನು ಅತೀ ಶ್ರೀಘ್ರದಲ್ಲೇ ಹಮ್ಮಿಕೊಳ್ಳಲು ಕೋರಿದರು. ಸದರಿ ವಿಷಯಕ್ಕೆ ಸಬಂಧಿಸಿದಂತೆ ಶ್ರೀ.ರಾಚಿಪ, ಸ.ಅ ವಾರ್ಡ್ ನಂ.85 ರವರು ಈಗಾಗಲೇ ಪುಟ್‌ಪಾತ್ ತೆರವುಗೊಳಿಸುವ ಕಾರ್ಯಕ್ರಮವನ್ನು ದಿನಾಂಕ:16-03-2021 ರಂದು ನಿಗಧಿಪಡಿಸಿ ಆರಕ್ಷಕರ ನಿರೀಕ್ಷಕರು, ಪೋಲಿಸ್ ಠಾಣೆ ರವರಿಗೆ ಪತ್ರದ ಮುಖಾಂತರ ತಿಳಿಸಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

Scanned with CamScanner

6. ಶ್ರೀಮತಿ.ರಾಜಶ್ರೀ ರವರು ವಾಸ ಲೇಔಟ್‌ನಲ್ಲಿ ಚರಂಡಿ ಹೂಳು ತೆಗೆಯುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಆದರೆ ಸದರಿ ಕಾಮಗಾರಿಯು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ. ಮತ್ತು ವಾರ್ಡ್ ವ್ಯಾಪ್ತಿಯಲ್ಲಿರುವ ಅನಧಿಕೃತ ಕಟ್ಟಡಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ದೊಡ್ಡನೆಕ್ಕುಂದಿ ಮುಖ್ಯ ರಸ್ತೆಯಲ್ಲಿ ಚರಂಡಿಯಲ್ಲಿ ಹೂಳು ತೆಗೆಯಲು ಶ್ರೀ.ರಾಮಕೃಷ್ಣ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರಿಗೆ ಸಭೆಯಲ್ಲಿ ತಿಳಿಸಿರುತ್ತಾರೆ.

7. ಶ್ರೀಮತಿ.ಇಂದು ರವರು ಮಾರುತಿ ಲೇಔಟ್‌ನ ರಾಘಂ ಸ್ಟೋರ್‌ನ ಮುಂದಿನ ರಸ್ತೆಯು ದುರಸ್ತಿತಿಯಲ್ಲಿದ್ದು, ಶೀಘ್ರವಾಗಿ ದುರಸ್ತಿಗೊಳಿಸಲು ಕೋರಿರುತ್ತಾರೆ. ಹಾಗೂ ಲೇಔಟ್‌ನಲ್ಲಿ ಕಾವೇರಿ ನೀರಿನ ಪೈಪ್‌ಲೈನ್ ತೊಂದರೆಯಲ್ಲಿದ್ದು, ಕುಡಿಯುವ ನೀರಿನ ಸಂಪರ್ಕ ನೀಡಲು ಕೋರಿರುತ್ತಾರೆ.

8. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಮುನ್ನೆಕೊಳಾಲು ಕೆರೆಯ ರಸ್ತೆಯಲ್ಲಿರುವ ಚರಂಡಿಯಲ್ಲಿ ಹೂಳು ತೆಗೆಯಲು ಸಭೆಯಲ್ಲಿ ಕೋರಿರುತ್ತಾರೆ.

9. ಶ್ರೀ.ಸುರೇಶ್ ಅದ್ಯಕ್ಷಕರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಿಸಲು ಸೂಚಿಸಿದರು.

ಸಭೆಯಲ್ಲಿ ಇತರ ಇಲಾಖೆಯವರಾದ ಬೆಸ್ಕಾಂ, ಪೋಲಿಸ್ ಮತ್ತು ತೋಟಗಾರಿಕೆ ಇಲಾಖೆ ರವರಿಗೆ ಮುಂದಿನ ಸಭೆಗೆ ಹಾಜರಾಗಲು ನೋಟೀಸ್ ಜಾರಿ ಮಾಡಲು ಶ್ರೀ ಸುರೇಶ್ ಅದ್ಯಕ್ಷಕರು ಸೂಚಿಸಿದರು.

ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

C. [signature]
ಕಾರ್ಯದರ್ಶಿ
ವಾರ್ಡ್ ನಂ.85

[signature]
ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.85

Scanned with CamScanner